# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ವಿಟಿಯು ಅಧಿನಿಯಮ ೧೯೯೪" ರ ಅಡಿಯಲ್ಲಿಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ"

# Visvesvaraya Technological University

(State University of Government of Karnataka Established as per the VTU Act, 1994)

"Jnana Sangama" Belagavi-590018, Karnataka, India

National Service Scheme

ಪ್ರೊ. ಬಿ.ಈ. ರಂಗಸ್ವಾಮಿ ಪಿಹೆಚ್.ಡಿ. ದೂರವಾಣಿ ಸಂ : 0831-2405468

ಕುಲಸಚಿವರು ಫ್ಯಾಕ್ಸ್ ಸಂ : 0831-2405467


ಸಂ. ವಿತಾವಿ/ಬಿಜಿಎಮ್/ಎನ್.ಎಸ್.ಎಸ್/18/2024-25/1748 ದಿನಾಂಕ : 22.08.2025

**:ಸುತ್ತೋಲೆ:**

ವಿಷಯ : 2025-26ನೇ ಸಾಲಿನಲ್ಲಿ ಮಹಾವಿದ್ಯಾಲಯಗಳಲ್ಲಿ ಭಾರತ ಸ್ಕೌಟ್ಸ್-ಗೈಡ್ಸ್ ಸಂಸ್ಥೆಯ (ರೋವರ್ ಮತ್ತು ರೇಂಜರ್) ಘಟಕ ತೆರೆಯುವ ಮತ್ತು ಶಿಬಿರವನ್ನು ನಡೆಸುವ ಕುರಿತು.

ಉಲ್ಲೇಖ: 1. BSG/SHQ/783/2025-26 ದಿನಾಂಕ: 29.07.2025

2. ಮಾನ್ಯ ಕುಲಸಚಿವರು ವಿತಾವಿ ಬೆಳಗಾವಿ ಇವರ ಪತ್ರದ ಸಂ 622 ದಿನಾಂಕ: 02.05.2023

3. ಮಾನ್ಯ ಕುಲಪತಿಗಳ ಅನುಮೋದನೆ ಕ್ರಮ ಸಂಖ್ಯೆ.03 ದಿನಾಂಕ: 18.08.2025

ಈ ಮೇಲ್ಕಂಡ ವಿಷಯ ಮತ್ತು ಉಲ್ಲೇಖಿತ ಸರ್ಕಾರದ ಆದೇಶದಂತೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ ಅಧೀನಕ್ಕೊಳಪಡುವ ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳಲ್ಲಿ ಭಾರತ ಸ್ಕೌಟ್ಸ್ & ಗೈಡ್ಸ್ ನ ರೋವರ್ & ರೇಂಜರ್ ಘಟಕವನ್ನು ಉಲ್ಲೇಖ 02 ರಂತೆ ತೆರೆಯಲು ಸೂಚಿಸಿದೆ.

ಉಲ್ಲೇಖ 3 ರಂತೆ ಮುಂಬರುವ ಮಾಹೆಗಳಲ್ಲಿ ಒಂದು ದಿನದ ರೋವರ್ & ರೇಂಜರ್ ಪ್ರಾರಂಭಿಕ ಶಿಬಿರವನ್ನು ನಡೆಸಲು ಮಾನ್ಯ ಕುಲಪತಿಗಳು ಅನುಮೋದಿಸಿದ್ದಾರೆ. ಅದರಂತೆ ಪ್ರತಿ ಮಹಾವಿದ್ಯಾಲಯದಿಂದ ರೋವರ್ ವಿಭಾಗಕ್ಕೆ ಒಬ್ಬ ಪುರುಷ ಉಪನ್ಯಾಸಕರನ್ನು ಮತ್ತು ರೇಂಜರ್ ವಿಭಾಗಕ್ಕೆ ಒಬ್ಬ ಮಹಿಳಾ ಉಪನ್ಯಾಸಕಿಯರನ್ನು ನಿಯೋಜಿಸಿ ಸೂಕ್ತ ಕ್ರಮ ಕೈಗೊಂಡು ಗೂಗಲ್ ಲಿಂಕ್ https://forms.gle/QZfFLHCpTKRbs5rE8 ಮೂಲಕ ದಿನಾಂಕ 4.9.2025 ರ ಒಳಗಾಗಿ ಮಾಹಿತಿ ಸಲ್ಲಿಸಲು ಸೂಚಿಸಲಾಗಿದೆ.

ಮುಂದುವರೆದು, ಶಿಬಿರದಲ್ಲಿ ಭಾಗವಹಿಸುವ ಪ್ರತಿ ವಿಭಾಗದ ಉಪನ್ಯಾಸಕ-ಉಪನ್ಯಾಸಕಿಯರಿಗೆ ಊಟೋಪಚಾರದ ವ್ಯವಸ್ಥೆ ಹಾಗೂ ಇತರೆ ಶುಲ್ಕಗಳಿಗೆ ತಗಲುವ ಒಟ್ಟು ವೆಚ್ಚ ರೂ. 550/- ಹಾಗೂ ಶಿಬಿರಕ್ಕೆ ಬಂದು ಹೋಗುವ ಪ್ರಯಾಣ ಖರ್ಚುಗಳನ್ನು ಆಯಾ ಮಹಾವಿದ್ಯಾಲಯಗಳ ರೋವರ್ & ರೇಂಜರ್ ಚಾಲ್ತಿ ಅಥವಾ ಸಂಚಿತ ನಿಧಿಯಿಂದ ಭರಿಸುವುದು ಮತ್ತು ಆ ದಿನದ ಗೈರು ಹಾಜರಿಯನ್ನು ಅನ್ಯಕಾರ್ಯನಿಮಿತ್ತ ಎಂದು ಪರಿಗಣಿಸಲು ಸೂಚಿಸಲಾಗಿದೆ.

R 23/08/25 BE

ಕುಲಸಚಿವರು

ಇವರಿಗೆ,

ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳು
ವಿ.ತಾ.ವಿ ಅಧೀನಕ್ಕೊಳಪಡುವ ಸಂಬಂಧಪಟ್ಟ
ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳು

ಪ್ರತಿ ಮಾಹಿತಿಗಾಗಿ :

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ಮಾನ್ಯ ಕುಲಸಚಿವರು, ಆಡಳಿತ ವಿಭಾಗ, ವಿತಾವಿ ಬೆಳಗಾವಿ.
3. ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳು ರಾ.ಸೇ.ಯೋ. ಕೋಶ, ಯುಸೇಇ, ಬೆಂಗಳೂರು.
4. ವಿಶೇಷಾಧಿಕಾರಿಗಳು, ಸಿ.ಎನ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್ ಸೈಟನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
5. ಕಛೇರಿ ಪ್ರತಿ.